ಓ ಎಸ್ ನಂ.66/2021
ಪಿ.ಡಬ್ಲ್ಯೂ-1 ವಿಜಯಲಕ್ಷ್ಮೀ ಗಂಡ ರಮೇಶ ಬಡಿಗೇರ

**(ಇಂದು ದಿನಾಂಕಃ 04-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟೀ ಸವಾಲುಃ ೩ ಮತ್ತು ೫ನೇ ಪ್ರತಿವಾದಿಗಳ ಪರ ಶ್ರೀ ಎಂ ಬಿ ಪಿ ವಕೀಲರಿಂದ.

ನಾನು ೧೦ ನೇ ತರಗತಿವರೆಗೆ ಗಾಣಗಾಪೂರದಲ್ಲಿ ಓದಿರುತ್ತೇನೆ. ನನಗೆ ಕನ್ನಡ ಮತ್ತು ಇಂಗ್ಲೀಷ್ ಓದಲು ಬರುತ್ತದೆ. ನನ್ನ ದಾವೆಯಲ್ಲಿ ಬರೆಸಿದ ವಿಚಾರಗಳು ನನಗೆ ಗೊತ್ತು. ಭೀಮಶಾ ತಂದೆ ಶರಬಯ್ಯರವರು ನನ್ನ ಅಜ್ಜನಾಗಿರುತ್ತಾರೆ. ಆ ಕುರಿತು ದಾವೆಯಲ್ಲಿ ತಿಳಿಸಿರುತ್ತೇನೆ. ನನ್ನ ಅಜ್ಜ ಭೀಮಶಾರವರಿಗೆ ಪಾರ್ವತಿ ಮತ್ತು ಸಲಬವ್ವ ಎಂಬ ೨ ಜನ ಹೆಣ್ಣುಮಕ್ಕಳು ಎಂದರೆ ಸರಿ. ಸದರಿ ೨ ಜನರನ್ನು ಬಿಟ್ಟು ನನ್ನ ಅಜ್ಜ ಭೀಮಶಾರವರಿಗೆ ಬೇರೆ ಮಕ್ಕಳು ಇರುವುದಿಲ್ಲ. ಸಲಬವ್ವ ನನ್ನ ತಾಯಿಯಾಗಿರುತ್ತಾರೆ. ಪಾರ್ವತಿ ನನ್ನ ದೊಡ್ಡಮ್ಮ ಆಗಿರುತ್ತಾರೆ. ಪಾರ್ವತಿರವರ ಗಂಡನ ಹೆಸರು ಶಿವರಾಯ ಆಗಿರುತ್ತದೆ. ಪಾರ್ವತಿರವರೂ ಕೂಡಾ ಗಾಣಗಾಪೂರದಲ್ಲಿ ನಮ್ಮ ಮನೆಯಲ್ಲಿಯೆ ಇರುತ್ತಿದ್ದರು. ನಮ್ಮ ಮನೆ ಎಂದರೆ ೪ನೇ ಪ್ರತಿವಾದಿ ಸಂತೋಷರವರ ಮನೆಯೆ ಎಂದರೆ ಸರಿ.

೨. ಪಾರ್ವತಿರವರಿಗೆ ಮಕ್ಕಳು ಇರದ ಕಾರಣ ಅವರು ೪ನೇ ಪ್ರತಿವಾದಿ ಸಂತೋಷರವರ ಜೊತೆಗೆ ಇದ್ದರು ಎಂದರೆ ಸರಿ. ಪಾರ್ವತಿರವರನ್ನು ಕೇವಲ ೪ನೇ ಪ್ರತಿವಾದಿ ಸಂತೋಷ ಮತ್ತು ಅವರ ಹೆಂಡತಿ ಮಾತ್ರ ನೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಎಲ್ಲರ ಹತ್ತಿರ ಬಂದು-ಹೋಗುತ್ತಿದ್ದರು ಎನ್ನುತ್ತಾರೆ. ಪಾರ್ವತಿರವರು ಎಲ್ಲರ ಹತ್ತಿರ ಹೋಗುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾರ್ವತಿರವರು ಮೃತರಾಗುವ ಸಮಯದಲ್ಲಿ ೪ನೇ ಪ್ರತಿವಾದಿ ಸಂತೋಷರವರ ಹತ್ತಿರ ಇದ್ದರು. ನನಗೆ ಒಬ್ಬ ಸಹೋದರ ಮತ್ತು ೨ ಜನ ಸಹೋದರಿಯರಿರುತ್ತಾರೆ. ೧ ಮತ್ತು ೨ನೇ ಪ್ರತಿವಾದಿಗಳಾದ ಭೀಮಬಾಯಿ ಮತ್ತು ದ್ಯಾವಮ್ಮ ನನ್ನ ಸಹೋದರಿಯರಾಗಿರುತ್ತಾರೆ. ಮೃತ ಭೀಮಶಾ ತಂದೆ ಮಲ್ಲೇಶಪ್ಪ ನನ್ನ ಸಹೋದರನಾಗಿರುತ್ತಾನೆ. ಗುರು ಮತ್ತು ಕಾಳಮ್ಮ ಎಂಬ ಸಹೋದರ ಮತ್ತು ಸಹೋದರಿ ನನಗೆ ಇದ್ದರು ಎಂದರೆ ಸರಿ. ಸಾಕ್ಷಿಯು ಅವರು ಮೃತರಾಗಿರುತ್ತಾರೆ ಎನ್ನುತ್ತಾರೆ.

೩. ಗುರುರವರು ೧೨ ನೆ ವಯಸ್ಸಿನವನಿದ್ದಾಗ ಮತ್ತು ಕಾಳಮ್ಮರವರು ೧೬ನೇ ವಯಸ್ಸಿನವಳಿದ್ದಾಗ ಮೃತರಾಗಿರುತ್ತಾರೆ. ಕಾಳಮ್ಮರವರಿಗೆ ಮದುವೆ ಆಗಿತ್ತು. ಕಾಳಮ್ಮರವರನ್ನು ಆಳಂದ ತಾಲೂಕಿನ ಲಾಡ ಚಿಂಚೋಳಿ ಗ್ರಾಮಕ್ಕೆ ಮದುವೆ ಮಾಡಿಕೊಡಲಾಗಿತ್ತು. ಕಾಳಮ್ಮರವರ ಗಂಡ ಈಗ ಜೀವಿತಾ ಇರುತ್ತಾರೆ. ಕಾಳಮ್ಮರವರ ಗಂಡನ ಹೆಸರು ಸೋಮಶೇಖರ ಆಗಿರುತ್ತದೆ. ಕಾಳಮ್ಮರವರಿಗೆ ಮಕ್ಕಳು ಇರುವುದಿಲ್ಲ. ಸಾಕ್ಷಿಯು ಅವರು ಚಿಕ್ಕವರಿದ್ದಾಗ ಮದುವೆ ಮಾಡಲಾಗಿತ್ತು ಅವರು ಗಂಡನ ಮನೆಗೆ ಇನ್ನೂ ಹೋಗಿಯೆ ಇರಲಿಲ್ಲ ಎನ್ನುತ್ತಾರೆ. ಗುರು ಮತ್ತು ಕಾಳಮ್ಮರವರ ಕುರಿತು ನಾನು ದಾವೆಯಲ್ಲಿ ತಿಳಿಸಿರುವುದಿಲ್ಲ.

೪. ನನ್ನ ಅಜ್ಜ ಭೀಮಶಾ ಮತ್ತು ಅಜ್ಜಿ ಲಕ್ಷ್ಮೀಬಾಯಿರವರು ನನ್ನ ತಾಯಿ ಸಲಬವ್ವ ಮತ್ತು ನನ್ನ ದೊಡ್ಡಮ್ಮ ಪಾರ್ವತಿರವರ ಮದುವೆ ಮಾಡಿಕೊಟ್ಟಿದ್ದರು ಎಂದರೆ ಸರಿ. ನನ್ನ ತಂದೆ-ತಾಯಿ ಇರುವಾಗಲೆ ನನ್ನ ಅಣ್ಣ ಭೀಮಶಾರವರ ಮದುವೆ ಮಾಡಿದ್ದರು ಎಂದರೆ ಸರಿ. ನನ್ನ ಅಣ್ಣ ಭೀಮಶಾರವರಿಗೆ ಬಂಗಾರೆವ್ವ ಮೊದಲನೆಯ ಹೆಂಡತಿ ಮತ್ತು ಶಾಂತಾಬಾಯಿರವರು ೨ನೆಯ ಹೆಂಡತಿ ಎಂದರೆ ಸರಿ. ನನ್ನ ತಂದೆ-ತಾಯಿಯೆ ನನ್ನ

ಸಹೋದರಿಯರಾದ ೧ ಮತ್ತು ೨ನೇ ಪ್ರತಿವಾದಿಗಳ ಮದುವೆ ಕೂಡಾ ಮಾಡಿದ್ದರು ಎಂದರೆ ಸರಿ. ನಮ್ಮ ತಂದೆ-ತಾಯಿ ಮೃತರಾದ ನಂತರ ನಾನು ಬಂಗಾರೆವ್ವ ಮತ್ತು ಶಾಂತಾಬಾಯಿಯ ಜೊತೆಗೆ ಇರುತ್ತಿದ್ದೆ ಎಂದರೆ ಸರಿಯಲ್ಲ. ಸಾಕ್ಷಿಯು ೩ನೇ ಪ್ರತಿವಾದಿ ಬಂಗಾರೆವ್ವ ತವರು ಮನೆಯಲ್ಲಿ ಇರುತ್ತಾಳೆ ನಾನು ಶಾಂತಾಬಾಯಿರವರ ಜೊತೆಗೆ ಇರುತ್ತಿದ್ದೆ ಎನ್ನುತ್ತಾರೆ.

೫. ನನ್ನ ಮದುವೆಯನ್ನು ಶಾಂತಾಬಾಯಿ ಮತ್ತು ಬಂಗಾರೆವ್ವರವರು ಸೇರಿ ಮಾಡಿರುತ್ತಾರೆ ಎಂದರೆ ಸರಿ. ನನ್ನ ಮದುವೆಗೆ ಬಂಗಾರೆವ್ವ ಮತ್ತು ಶಾಂತಾಬಾಯಿರವರು ಖರ್ಚು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ನಾನು ಖಾಸಗಿಯಾಗಿ ಕೆಲಸ ಮಾಡುತ್ತಿದ್ದೆ, ಸದರಿ ಹಣದಿಂದ ನನ್ನ ಮದುವೆ ಮಾಡಿಕೊಂಡಿರುತ್ತೇನೆ ಎನ್ನುತ್ತಾರೆ. ನಾನು ನನ್ನ ಸ್ವಂತ ಹಣದಿಂದ ಮದುವೆ ಮಾಡಿಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಬಂಗಾರೆವ್ವ ಮತ್ತು ಶಾಂತಾಬಾಯಿರವರು ನನ್ನ ಮದುವೆಯಲ್ಲಿ ನನಗೆ ಬಂಗಾರ ನೀಡಿ, ಸಾಕಷ್ಟು ಹಣ ಖರ್ಚು ಮಾಡಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಈಗ ೩ನೇ ಪ್ರತಿವಾದಿ ಬಂಗಾರೆವ್ವ ಮತ್ತು ೬ನೇ ಪ್ರತಿವಾದಿ ಉಲ್ಲಾಸರವರ ಹೆಸರಿನಲ್ಲಿ ಇರುತ್ತವೆ. ಸಾಕ್ಷಿಯು ಈಗ ಮಾರಾಟ ಕೂಡಾ ಆಗಿದ್ದು, ಆಸ್ತಿಗಳು ಬೇರೆಯವರ ಹೆಸರಿನಲ್ಲಿ ಮತ್ತು ನನ್ನ ದೊಡ್ಡಮ್ಮ ಪಾರ್ವತಿರವರ ಹೆಸರಿನಲ್ಲಿ ಇರುತ್ತವೆ ಎನ್ನುತ್ತಾರೆ.

೬. ದಾವಾ ಜಮೀನುಗಳ ಸರ್ವೆ ನಂಬರ ೨೩೦ ರಲ್ಲಿ ೧೭ ಎಕರೆ ೨೪ ಗುಂಟೆ ಮತ್ತು ಸರ್ವೆ ನಂಬರ ೧೧೦ ರಲ್ಲಿ ೬ ಎಕರೆ ೧೦ ಗುಂಟೆ ಜಮೀನು ಇರುತ್ತವೆ. ಸದರಿ ೨ ಜಮೀನುಗಳಲ್ಲಿ ಮಾರಾಟ ಆಗಿರುತ್ತದೆ. ೨೦ ಗುಂಟೆ ಜಮೀನು ಮುಸ್ಲಿಂ ಸಮುದಾಯದ ಈದ್ಗಾಗೆ ನೀಡಿರುತ್ತಾರೆ. ೧೭ ಎಕರೆ ಜಮೀನಿನಲ್ಲಿ ೬ ಎಕರೆ ಜಮೀನೂ ಕೂಡಾ ಮಾರಾಟ

ಮಾಡಿರುತ್ತಾರೆ. ಸದರಿ ೬ ಎಕರೆ ಜಮೀನನ್ನು ಇಂದೂಬಾಯಿ ಗಂಡ ಮಾರುತಿರವರಿಗೆ ಮಾರಾಟ ಮಾಡಿರುತ್ತಾರೆ. ಸರ್ವೆ ನಂಬರ ೧೧೦ ರ ೬ ಎಕರೆ ೧೦ ಗುಂಟೆ ಜಮೀನಿನಲ್ಲಿ ಮಹಾರಾಷ್ಟ್ರದವರಿಗೆ ೩ ಎಕರೆ ಜಮೀನು ಮಾರಾಟ ಮಾಡಿದ್ದು, ಅದರಲ್ಲಿ ಅವರು ಗುಡಿ ಕಟ್ಟಿರುತ್ತಾರೆ. ಸದರಿ ಗುಡಿಯ ಹೆಸರು ಬಾಳುಮಾಮ ಗುಡಿ ಇರುತ್ತದೆ. ಈದ್ಗಾಕ್ಕೆ ೨೦೧೦ ರಲ್ಲಿ ಜಮೀನು ಮಾರಾಟ ಮಾಡಿರುತ್ತಾರೆ. ಇಂದುಬಾಯಿರವರಿಗೆ ೨೦೦೭ ರಲ್ಲಿ ಜಮೀನು ಮಾರಾಟ ಮಾಡಿರುತ್ತಾರೆ.

೭. ಮಹಾರಾಷ್ಟ್ರದವರು ಗುಡಿ ಕಟ್ಟಿದ ಜಮೀನನ್ನು ೨೦೨೦ ರಲ್ಲಿ ಮಾರಾಟ ಮಾಡಿರುತ್ತಾರೆ. ಮಾರಾಟವಾದ ನಂತರ ೬ ತಿಂಗಳಿಂದ ೧ ವರ್ಷದಲ್ಲಿ ಸದರಿ ಮಾರಾಟದ ವಿಚಾರಗಳು ನನಗೆ ಗೊತ್ತಾಗಿರುತ್ತದೆ. ಮಹಾರಾಷ್ಟ್ರದವರಿಗೆ ಜಮೀನು ಮಾರಿದ ವಿಚಾರ ೨೦೨೧ ರಲ್ಲಿ ನನಗೆ ಗೊತ್ತಾಗಿರುತ್ತದೆ. ದಾವಾ ಜಮೀನುಗಳಲ್ಲಿಯೆ ಸದರಿ ಮಾರಾಟಗಳಾಗಿರುತ್ತವೆ. ಸದರಿ ಖರೀದಿದಾರರನ್ನು ನಾನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ಖರೀದಿದಾರರಿಗೆ ಯಾವ ಹಿಸ್ಸೆಗಳು ಹೋಗಿವೆ ಎಂದು ನಾನು ಬರೆಸಿರುವುದಿಲ್ಲ.

೮. ನಮ್ಮ ತಂದೆ ಮೃತರಾದ ನಂತರ ನಮ್ಮ ತಾಯಿ ಸಲಬವ್ವರವರು ಬಂಗಾರೆವ್ವ ಮತ್ತು ಶಾಂತಾಬಾಯಿರವರ ಜೊತೆಗೆ ಇರುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ನಾನು ಮತ್ತು ನನ್ನ ತಾಯಿ ಇರುತ್ತಿದ್ದೇವು, ನನ್ನ ಅಣ್ಣ ಮತ್ತು ಅಣ್ಣನ ಹೆಂಡತಿ ಬೇರೆ ವಾಸ ಇರುತ್ತಿದ್ದರು ಎನ್ನುತ್ತಾರೆ. ನನ್ನ ಅಣ್ಣ ಭೀಮಶಾ ಮೃತನಾಗುವ ಮೊದಲೆ ನನ್ನ ತಾಯಿ ಸಲಬವ್ವ ಮತ್ತು ನನ್ನ ತಂದೆ ಮಲ್ಲೇಶಪ್ಪರವರು ಮೃತರಾಗಿರುತ್ತಾರೆ. ನನ್ನ ತಾಯಿ ಬಂಗಾರೆವ್ವ ಮತ್ತು ಶಾಂತಾಬಾಯಿರವರ ಹತ್ತಿರ ಇರುತ್ತಿದ್ದರೂ ಸಹ ನಾನು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ-ತಾಯಿ ಮೃತರಾದ ನಂತರವೆ ನನ್ನ ಮದುವೆ ಆಗಿರುತ್ತದೆ.

೯. ಬಂಗಾರೆವ್ವ ಮತ್ತು ಶಾಂತಾಬಾಯಿರವರು ತಲಾಟಿ ಹತ್ತಿರ ಹೋಗಿ, ದಾವಾ ಆಸ್ತಿಗಳನ್ನು ಮಾಡಿಕೊಂಡಿರುತ್ತಾರೆ. ನಮ್ಮ ತಾಯಿ ಯಾವುದೆ ದಾಖಲೆ ಬರೆದುಕೊಟ್ಟಿರುವುದಿಲ್ಲ. ಬಂಗಾರೆವ್ವ ಮತ್ತು ಶಾಂತಾಬಾಯಿಗೆ ನಮ್ಮ ತಾಯಿ ಬರೆದುಕೊಟ್ಟ ಈಗ ನನಗೆ ತೋರಿಸಿದ ಮೃತ್ಯುಪತ್ರದ ಮೂಲಕ ಆಸ್ತಿ ಆಗಿರುತ್ತದೆ ಎಂದರೆ ಸರಿಯಲ್ಲ. ಗುರುಶಾಂತಯ್ಯ ತಂದೆ ಈರಯ್ಯ ಮಠ ಯಾರು ಎಂದು ನನಗೆ ಗೊತ್ತಿಲ್ಲ. ಕಲ್ಲಪ್ಪಗೌಡ ತಂದೆ ಗೋಪಗೊಂಡ ಯಾರು ಎಂದು ನನಗೆ ಗೊತ್ತಿಲ್ಲ. ಕಲ್ಲಯ್ಯ ತಂದೆ ಮಲಕಯ್ಯ ನಂದಿಕೋಲ ಮಠರವರು ಗೊತ್ತು, ಅವರು ಈಗ ಜೀವಿತಾ ಇರುತ್ತಾರೆ. ಕಲ್ಲಪ್ಪ ತಂದೆ ಗುರಪ್ಪ ಕಂಬಾರ ನನಗೆ ಗೊತ್ತಿಲ್ಲ. ದುರ್ಯೋದನ ತಂದೆ ಮಲ್ಲಾರಿರವರು ನನಗೆ ಗೊತ್ತಿಲ್ಲ. ನಮ್ಮ ತಾಯಿ ಬರೆದುಕೊಟ್ಟ ಮೃತ್ಯುಪತ್ರದ ದಾಖಲೆಯ ಮೇಲೆ ಬಂಗಾರೆವ್ವ ಮತ್ತು ಶಾಂತಾಬಾಯಿರವರ ಹೆಸರಿನಲ್ಲಿ ಮೇಲೆ ಜಮೀನು ಆಗಿದೆ ಎಂದರೆ ಸರಿಯಲ್ಲ.

೧೦. ೪ನೇ ಪ್ರತಿವಾದಿ ಸಂತೋಷ ಮೃತ್ಯುಪತ್ರದ ಮೇಲೆ ಹೆಸರು ದಾಖಲಿಸದಂತೆ ತಕರಾರು ಅರ್ಜಿ ನೀಡಿದ್ದರು ಎಂದರೆ ಸರಿಯಲ್ಲ. ಬಂಗಾರೆವ್ವ ಮತ್ತು ಶಾಂತಾಬಾಯಿರವರು ನಮ್ಮ ತಾಯಿ ಮೃತ್ಯುಪತ್ರ ಮಾಡಿಕೊಟ್ಟ ಕುರಿತು ಕಂದಾಯಾಧಿಕಾರಿಗಳಿಗೆ ಅರ್ಜಿ ನೀಡಿದ್ದರು ಎಂದರೆ ಸರಿಯಲ್ಲ. ನನ್ನ ಮದುವೆ ೨೦೦೫ ರಲ್ಲಿ ಆಗಿರುತ್ತದೆ. ಬಂಗಾರೆವ್ವ ಮತ್ತು ಶಾಂತಾಬಾಯಿ ಮೃತ್ಯುಪತ್ರದ ಆಧಾರದ ಮೇಲೆ ತಮ್ಮ ಹೆಸರು ದಾಖಲಿಸಲು ಅರ್ಜಿ ನೀಡಿದ ವಿಚಾರ ನನಗೆ ಗೊತ್ತಿದ್ದರೂ ಸಹ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ್ಯುಪತ್ರದ ಆಧಾರದ ಮೇಲೆ ಹೆಸರು ದಾಖಲಿಸಲು ನನ್ನನ್ನು ಕಂದಾಯಾಧಿಕಾರಿಗಳು

ವಿಚಾರಣೆ ಮಾಡಿರುವುದಿಲ್ಲ. ೧ ಮತ್ತು ೪ನೇ ಪ್ರತಿವಾದಿಗಳು ಸದರಿ ಮೃತ್ಯುಪತ್ರದ ಮೇಲೆ ಮುಟೇಷನ್ ಆಗಲು ತಕರಾರು ಹಾಕಿದ್ದರು ಎಂದರೆ ಸರಿಯಲ್ಲ. ೧ ಮತ್ತು ೪ನೇ ಪ್ರತಿವಾದಿಗಳು ತಕರಾರು ಅರ್ಜಿ ನೀಡಿದ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ತಕರಾರು ಅರ್ಜಿಯ ಮೇಲೆ ಕಂದಾಯಾಧಿಕಾರಿಗಳು ನನ್ನನ್ನೂ ಸಹ ಕರೆಯಿಸಿ, ವಿಚಾರಣೆ ಮಾಡಿದಾಗ ನಾನು ನನ್ನ ಯಾವುದೆ ತಕರಾರು ಇರುವುದಿಲ್ಲ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ.

೧೧. ಕಂದಾಯಾಧಿಕಾರಿಗಳು ನನ್ನನ್ನು ವಿಚಾರಣೆ ಮಾಡಿರುವುದಾಗಿ ನಮೂದಿಸಿರುವುದು ಸುಳ್ಳು ಇರುತ್ತದೆ. ನನ್ನ ಮದುವೆಯಾದ ೩-೪ ವರ್ಷಗಳ ನಂತರ ನನಗೆ ಪಹಣಿಯಲ್ಲಿ ಬಂಗಾರೆವ್ವ ಮತ್ತು ಶಾಂತಾಬಾಯಿರವರ ಹೆಸರು ಬಂದಿರುವುದು ಗೊತ್ತಾಗಿರುತ್ತದೆ. ನಾನು ಸದರಿ ಪಹಣಿ ಮತ್ತು ಮುಟೇಷನಗಳನ್ನು ಪ್ರಶ್ನಿಸಿರುವುದಿಲ್ಲ. ನಾನು ಕೂಡಾ ಕಂದಾಯಾಧಿಕಾರಿಗಳ ಮುಂದೆ ಹಾಜರಾಗಿ, ತಕರಾರು ಇಲ್ಲ ಎಂದು ಹೇಳಿದ್ದರಿಂದ ಮುಟೇಷನ್ ಮಾಡಿದ್ದರೂ ಸಹ ನಾನು ಈಗ ಕಂದಾಯಾಧಿಕಾರಿಗಳ ಮುಂದೆ ಹಾಜರಾಗಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

೧೨. ನಮ್ಮ ಹಿರಿಯರಿಗೆ ಚಡಚಣ ತಾಲೂಕಿನ ಉಮ್ರಜನಲ್ಲಿ ಕೂಡಾ ಜಮೀನು ಇತ್ತು ಎಂದರೆ ಸರಿ. ಸದರಿ ಜಮೀನು ಈಗ ನನ್ನ ಸಹೋದರಿಯಾದ ಭೀಮಬಾಯಿಯ ಹೆಸರಿನಲ್ಲಿ ಇರುತ್ತದೆ. ಸದರಿ ಜಮೀನು ೬ ಎಕರೆ ೨೦ ಗುಂಟೆ ಇದ್ದು, ಅದು ೧ನೇ ಪ್ರತಿವಾದಿ ಭೀಮಬಾಯಿಯ ಹೆಸರಿನಲ್ಲಿರುತ್ತದೆ. ಸದರಿ ಜಮೀನನ್ನು ನಾನು ಈ ದಾವೆಯಲ್ಲಿ ಸೇರಿಸಿರುವುದಿಲ್ಲ. ಪಹಣಿಯಲ್ಲಿ ಹೆಸರು ಇರುವ ಭೀಮಬಾಯಿ, ಸಂತೋಷ ಮತ್ತು ಉಲ್ಲಾಸರವರೆ ಸದರಿ ಜಮೀನುಗಳ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿ.

೧೩. ಮುಟೇಷನ ಆದ ವಿಚಾರ ನನಗೆ ಗೊತ್ತಿದ್ದರೂ ಸಹ ಈಗ ಪ್ರತಿವಾದಿ ೩ ಮತ್ತು ೫ ರವರಿಗೆ ತೊಂದರೆ ನೀಡುವ ಉದ್ದೇಶದಿಂದ ಒಂದು ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಮೊದಲು ಕೆಲಸ ಮಾಡುತ್ತದ್ದ ಕುರಿತು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯ ವಿಷಯಗಳನ್ನು ನಾನೆ ಹೇಳಿ ಬರೆಸಿರುತ್ತೇನೆ. ನಾನು ಒಂದು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿ ೩ ಮತ್ತು ೫ ರವರಿಗೆ ತೊಂದರೆ ಕೊಡುವ ಉದ್ದೇಶದಿಂದ ಒಂದು ಸುಳ್ಳು ದಾವೆಯನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**[** ಈ ಹಂತದಲ್ಲಿ ೩ ಮತ್ತು ೫ನೇ ಪ್ರತಿವಾದಿ ಪರ ವಕೀಲರು ತಾವು ಮುಂದುವರೆದು ೪ ಮತ್ತು ೬ನೇ ಪ್ರತಿವಾದಿಗಳ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಕೂಡಾ ಅಳವಡಿಸಿಕೊಳ್ಳುವುದಾಗಿ ಹೇಳಿರುತ್ತಾರೆ. **]**

ಪಾಟೀ ಸವಾಲು **:** ೨ನೇ ಪ್ರತಿವಾದಿ ಪರ ಶ್ರೀ ಆರ್ ಡಿ ಎಸ್ ವಕೀಲರಿಂದ.

ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.